

ನೋಟ ಮುಗಿದು ಬಾರಿ ಕೂಟ
ಪ್ರಣಯ ಕೇಳಿ ನೂರಾರು
ತೆಳು ರೇಖೆ ಹೋತ
ಕೊನೆಗೊಬ್ಬರೂ ಉಳಿಯಲಿಲ್ಲ
ನಗ್ನ ಪ್ರೇಮಿ ಸುಮ್ಮನೆ ದಣಿದೆ
ನೀನಾಗಲಿಲ್ಲ ಯಾರಿಗೂ
ಎಲ್ಲರ, ಎಲ್ಲಾ ಬಿಡಿಸಿ, ಹರಡಿ ಕೆದರಿಬಿಟ್ಟೆ
ನಿನ್ನ ಧಾವಂತ ಒಂದನೆರಡೆರಡು ಕತ್ತರಿಸಿ,
ಹರಿದರಿಸಿ ಬಣ್ಣ ಲೇಪ
ದೇಹದಂಗಾಂಗ ಸುಮ್ಮನೆ ಇರುವುದೆಲ್ಲ
ಪರಾಕಾಷ್ಠೆ ಉತ್ತುಂಗದಂಚಿಗೆ
ಬಂದು ನಿಂತ ಅಮೃತಮತಿಯರ ಬಿಡದೆ
ಹೀರಿ ಬಣ್ಣಗಳ ಸಂಕರಸಿದ ಅಷ್ಟಾವಂಕರ ಗೂಳಿ

ಯುದ್ಧ ಕೊಂದ ಚಿತ್ರ ಯುದ್ಧಕಿಂತಲೂ ಘೋರ,
ರಣರೌದ್ರ ವಿನ್ಯಾಸ ಆದರದೊಳುದುಗಿದ
ಚಿತ್ತಾರ ಬೆದಕಿ ಕೆದಕಿ ಒಳನುಸುಳಿದ
ರಕ್ಕಸವತಾರ ಮಿಂದು ಸುರತದಲಿ
ಬಹುಜನ ಸೆಳೆತದಲುಬ್ಬಿ ಮೊರೆದ
ಲಂಪಟ ಮೊಗೆ ಮೊಗೆದು ಕುಡಿದ
ತನ್ನೊಳಗೇ ಸ್ರವಿಸಿದ ಸುರತಿ
ಬದುಕ ಮೋಹಿಸಿ ಕಾಮಾಗ್ನಿಗರ್ಪಿಸಿದ
ರಚನಾತುರ ಚತುರ

ನಿರಚನೆಗಿಳಿಯದೀ ಆಕಾರ ಲೋಕಾಂತ ಸಾಕಾರ
ಪುರುಷಪ್ರಧಾನಿ ಆಸ್ಥಾನಕೆ
ಸಾಟಿಯಾಗಿ ಸಾರ್ತ್ರೆ
ಜೊತೆಗೇ ಬೂವಾರ ಸಂಧಿ ಶಬ್ದಪಾತಳಿ
ಮಧ್ಯೆ ಮರೆತು ನಿಂತ ಕಾಲದ ಗೂಳಿಶಿಲ್ಪ,
ದೇಶದ ಕರಿ ಹೋತ ಮೈದುಂಬಿ ಮೆರೆದಂತೆ
ತನ್ನಿಚ್ಛೆಯಲಿ.

ಟಿಪ್ಪಣಿ: ಪ್ರಖ್ಯಾತ ಕಾದಂಬರಿಕಾರ ಜೇನ್ ಪಾಲ್ ಸಾರ್ತ್ರೆ ಮತ್ತು ಮಹಿಳಾವಾದಿ ಚಿಂತಕಿ ಸಿಮೋನ್ ಡಿ ಬೂವಾ, ಇಬ್ಬರೂ ಪಿಕಾಸೋನ ಆಪ್ತಮಿತ್ರರು.